ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No:0821-2417107

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID: gmtech@cescmysore.org

Company Identity Number[CIN]:- **U40109KA2004SGC035177**

**ಸಂಖ್ಯೆ: ಚಾವಿಸನಿನಿ/ಪ್ರವ್ಯ(ತಾ)/ಉಪ್ರವ್ಯ(ಎಂಐಎಸ್)/ಸಪ್ರವ್ಯ-2/ವ್ಯ/22-23/** 12835-38 **ದಿನಾಂಕ:** 17 SEP 2022

ಮುಖ್ಯ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನಾ ವಲಯ,
ಚಾವಿಸನಿನಿ, ಮೈಸೂರು.

ಮಾನ್ಯರೇ,

**ವಿಷಯ:** ಮೆ॥ ಏಷಿಯನ್ ಫ್ಯಾಬ್ ಟೆಕ್ ಲಿಮಿಟೆಡ್, ಬೆಂಗಳೂರು ರವರ 20 ಮೆಗಾವ್ಯಾಟ್ ಸೋಲಾರ್ ಸ್ಥಾವರಕ್ಕೆ ಸಂಬಂಧಿಸಿದ 66 ಕೆವಿ ಪ್ರಸರಣ ಮಾರ್ಗದ ವಾಹಕವನ್ನು ಎಳೆಯಲು ಮಾರ್ಗಮುಕ್ತತೆಗೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:** 1. ಮುಇಂ(ವಿ)/ಅಇಂ(ವಿ)/ಸಇಂ(ಕ)-1/4095-97 ದಿನಾಂಕ:16.09.2022.
2. ನಿರ್ದೇಶಕರು(ತಾಂತ್ರಿಕ)ರವರ ಅನುಮೋದಿತ ಟಿಪ್ಪಣಿ ದಿನಾಂಕ: 17.09.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು ರವರು ದಿನಾಂಕ 18.09.2022 ರಂದು 03 ಗಂಟೆಗಳ ಕಾಲ ಸಮಯ 14.00 ರಿಂದ 17.00 ಗಂಟೆಯವರೆಗೆ ಹನೂರು ವಿದ್ಯುತ್ ವಿತರಣಾ ಕೇಂದ್ರಕ್ಕೆ ಜೋಡನೆ ಮಾಡಲು ಉದ್ದೇಶಿಸಿರುವ 20 ಮೆಗಾವ್ಯಾಟ್ ಸಾಮರ್ಥ್ಯದ ಸೋಲಾರ ವಿದ್ಯುತ್ ಉತ್ಪಾದನಾ ಸ್ಥಾವರಕ್ಕೆ ಸಂಬಂಧಿಸಿದ 66 ಕೆ.ವಿ ಪ್ರಸರಣ ಮಾರ್ಗಕ್ಕೆ ವಾಹಕಗಳನ್ನು ಎಳೆಯಲು ಹಾಲಿ ಇರುವ 66 ಕೆ.ವಿ ಹನೂರು-ಅಜ್ಜಿಪುರ-ಕೌದಳ್ಳಿ ಪ್ರಸರಣ ಮಾರ್ಗಕ್ಕೆ ಮಾರ್ಗಮುಕ್ತತೆ ನೀಡುವಂತೆ ಹಾಗೂ ಸದರಿ ವಾಹಕ ಅಳವಡಿಸುವ ಕಾರ್ಯವು ಹನೂರು- ಅಜ್ಜಿಪುರ-ಕೌದಳ್ಳಿ ಪ್ರಸರಣ ಮಾರ್ಗ ಮಧ್ಯ ಇರುವುದರಿಂದ ಒಟ್ಟು 5 ಸಂಖ್ಯೆಯ ವಿದ್ಯುತ್ ವಿತರಣಾ ಕೇಂದ್ರಗಳಿಗೆ (ರಾಮಾಪುರ, ಮಾರ್ಟಳ್ಳಿ ಕೌದಳ್ಳಿ,ಬಂಡಳ್ಳಿ ಹಾಗೂ ಅಜ್ಜಿಪುರ,) ಹಾಗೂ 20 ಮೆಗಾವ್ಯಾಟ್ ಸಾಮರ್ಥ್ಯದ ಸೋಲಾರ್ ವಿದ್ಯುತ್ ಉತ್ಪಾದನಾ ಸ್ಥಾವರಕ್ಕೆ (ಬಂಡಳ್ಳಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಜೋಡಣೆಯಾಗಿದೆ) 3 ಗಂಟೆಗಳ ಕಾಲ ವಿದ್ಯುತ್ ಅಡಚಣೆಯಾಗಲಿದ್ದು ಅವುಗಳಿಗೆ ಯಾವುದೇ ಪರ್ಯಾಯ ವ್ಯವಸ್ಥೆ ಇರುವುದಿಲ್ಲ ಎಂದು ತಿಳಿಸಿ, ಮಾರ್ಗಮುಕ್ತತೆಗೆ ಸಹಮತ ನೀಡುವಂತೆ ಕೋರಿರುತ್ತಾರೆಂದು ತಿಳಿಸೀರುತ್ತೀರಿ.

ಮುಂದುವರೆದು, ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಚಾಮರಾಜನಗರ-ಕೊಡಗು ರವರು ಮೇಲ್ಕಂಡ ಕಾಮಗಾರಿಗೆ ದಿನಾಂಕ 18.09.2022 ರಂದು 03 ಗಂಟೆಗಳ ಕಾಲ ಸಮಯ 14.00 ರಿಂದ 17.00 ಗಂಟೆಯವರೆಗೆ ಮಾರ್ಗಮುಕ್ತತೆಗೆ ನೀಡುವಂತೆ ಶಿಫಾರಸ್ಸು ಮಾಡಿರುತ್ತಾರೆಂದು ತಿಳಿಸಿ ತಾವು ಸಹ ಮಾರ್ಗಮುಕ್ತತೆಗೆ ಶಿಫಾರಸ್ಸು ಮಾಡಿರುತ್ತೀರಿ.

ಆದುದರಿಂದ, ದಿನಾಂಕ 18.09.2022 ರಂದು ದಿನಾಂಕ 18.09.2022 ರಂದು 03 ಗಂಟೆಗಳ ಕಾಲ ಸಮಯ 14.00 ರಿಂದ 17.00 66 ಕೆ.ವಿ ಹನೂರು-ಅಜ್ಜಿಪುರ-ಕೌದಳ್ಳಿ ಪ್ರಸರಣ ಮಾರ್ಗಕ್ಕೆ ಮಾರ್ಗಮುಕ್ತತೆಗೆ ನಿರ್ದೇಶಕರು(ತಾಂತ್ರಿಕ) ರವರು ಉಲ್ಲೇಖ(2) ರಲ್ಲಿ ಅನುಮೋದಿಸಿರುತ್ತಾರೆ.

ಈ ನಿಟ್ಟಿನಲ್ಲಿ, ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ ರವರು, ಮಾರ್ಗಮುಕ್ತತೆಯ ದಿನದಂದು ಐ.ಪಿ ಸ್ಥಾವರಗಳಿಗೆ ಬದಲಾದ ಸಮಯದಲ್ಲಿ ವಿದ್ಯುತ್ ಪೂರೈಸುವಂತೆ ಕ್ರಮ ವಹಿಸಲು, ಕೋವಿಡ್ ಕೇರ್ ಸೆಂಟರ್ ಆಸ್ಪತ್ರೆಗಳಿಗೆ ಬದಲಿ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಹಾಗೂ ಗ್ರಾಹಕರುಗಳಿಗೆ ವಿದ್ಯುತ್ ವ್ಯತ್ಯಯದ ಮಾಹಿತಿಯನ್ನು ಮುಂಚಿತವಾಗಿ ಪತ್ರಿಕಾ ಪ್ರಕಟಣೆಯ ಮೂಲಕ ತಲುಪಿಸಲು ಮತ್ತು ಸದರಿ ದಿನಾಂಕದಂದು ಕೇಂದ್ರ ಸ್ಥಾನದಲ್ಲೇ ಇದ್ದು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಲೋಡ್ ಮಾನಿಟರಿಂಗ್ ಮಾಡುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿರುತ್ತೇನೆ.

**ಸೂಚನೆ: ಮೇಲೆ ತಿಳಿಸಿರುವ ಮಾರ್ಗಮುಕ್ತತೆಯ ದಿನಾಂಕಗಳಂದು ಯಾವುದೇ ಸರ್ಕಾರಿ ಕಾರ್ಯಕ್ರಮಗಳು/ಪರೀಕ್ಷೆಗಳಿದ್ದಲ್ಲಿ ಸದರಿ ದಿನಾಂಕದಂದು ಮಾರ್ಗಮುಕ್ತತೆಯು ರದ್ದಾಗುವುದೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.**

ತಮ್ಮ ವಿಶ್ವಾಸಿ

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು

<u>ಪ್ರತಿಗಳು:</u>

1. ಮುಖ್ಯ ಇಂಜಿನಿಯರ್(ವಿ) ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು.
2. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾಮರಾಜನಗರ–ಕೊಡಗು,ಚಾವಿಸನಿನಿ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಡಿಸಿಸಿ, ಚಾವಿಸನಿನಿ, ಮೈಸೂರು.
4. ಆ.ಸ/ತಾ.ಸ., ವ್ಯನಿ/ನಿ(ತಾಂ). ರವರು ಇದನ್ನು ಮಾನ್ಯ ವ್ಯನಿ/ನಿ(ತಾಂ) ರವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ.
   ಮುಖ್ಯ ಕಡತ/ ಕಛೇರಿ ಪ್ರತಿ.